<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

**<u>ಮುಂದುವರಿದ ಪಾಟೀ ಸವಾಲುಃ - ಕು. ಕೆ.ವಿ.ಪಿ. ವಕೀಲರಿಂದ ವಾದಿಯವರ ಪರವಾಗಿ</u>**

2. ನನಗೆ ಇಂಗ್ಲೀಷ ಭಾಷೆಯನ್ನು ಓದಲು ಬರುವುದಿಲ್ಲ. ನನ್ನ ಪರವಾಗಿ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಸಲ್ಲಿಸಲು ಮಾಹಿತಿ ಕೊಟ್ಟವರು ಯಾರು ಎಂದು ನನಗೆ ಗೊತ್ತಿಲ್ಲ. ಆದ್ದರಿಂದ ಪ್ರತಿವಾದ ಪತ್ರದಲ್ಲಿ ಹೇಳಿರುವ ವಿಚಾರ ನನಗೆ ಗೊತ್ತಿಲ್ಲ. ಸತ್ಯಂದ್ರ ಬಂಗೇರ, ಅವರ ಕುಟುಂಬಸ್ಥರು ಹಾಗೂ ಅವರ ಮಕ್ಕಳ ಬಗ್ಗೆ ನನಗೆ ವೆಯಕ್ತಿಕ ಮಾಹಿತಿ ಇರುವುದಿಲ್ಲ. ಯಾವುದೇ ಆಸ್ತಿಯನ್ನು ಖರೀದಿಸುವಾಗ ಅದರ ದಾಖಲಾತಿಗಳನ್ನು ಪರಿಶೀಲಿಸಿ ನಂತರ ಖರೀದಿಸಬೇಕು ಎಂಬ ಸಾಮಾನ್ಯ ಜ್ಞಾನ ನನಗೆ ಇದೆ.

3. ನಾನು ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ನಂತರ ಖರೀದಿಸಿದ್ದೇನೆ. ಆ ಕಾರಣದಿಂದ ದಾವಾ ಆಸ್ತಿಗಳ ಮೇಲೆ ವಾದಿಗೆ ಹಕ್ಕು ಇರುವ ವಿಚಾರ ನನಗೆ ಗೊತ್ತಿತ್ತು. ಆ ಕಾರಣದಿಂದ ದಾವಾ ಆಸ್ತಿಯ ಮೇಲೆ ವಾದಿಗೆ ಹಕ್ಕು ಇರುವ ವಿಚಾರ ತಿಳಿದಿದ್ದರು ಸಹಃ ನೀವು ದಾವಾ ಆಸ್ತಿಯನ್ನು ಖರೀದಿಸಿದ್ದೀರಿ ಎಂದರೆ ಸಾಕ್ಷಿಯು ನಾನು ಖರೀದಿಸಿ 5-6 ವರ್ಷ ಆಗಿದೆ ಆ ಸಮಯದಲ್ಲಿ ಅವರಿಗೆ ಹಕ್ಕು ಇರಲಿಲ್ಲ ಆದರೆ 2-3 ವರ್ಷಗಳ ಹಿಂದೆ ಪೊಲೀಸ ನೋಟಿಸು ಬಂದಾಗ ನ್ಯಾಯಾಲಯಕ್ಕೆ ಹಾಜರು ಪಡಿಸಬೇಕು ಎಂದು ತಿಳಿಯಿತು.

4. ದಾವಾ ಆಸ್ತಿಗಳ ಮೇಲೆ ಸತ್ಯಂದ್ರ ಬಂಗೇರ ರವರಿಗೆ ಸಂಪೂರ್ಣ ಹಕ್ಕು ಇರಲಿಲ್ಲ ಎಂಬ ವಿಚಾರ ನನಗೆ ಗೊತ್ತಿತ್ತು. ದಾವಾ ಆಸ್ತಿಯನ್ನು ಸತ್ಯಂದ್ರ ಬಂಗೇರ ರವರು ವಾದಿ, ಅವರ ಹೆಂಡತಿ ಹಾಗೂ ಒಂದನೇ ಪ್ರತಿವಾದಿಯ ಪರವಾಗಿ ಲೀಸ್ ಗೆ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಸದರಿ ವಿಷಯವನ್ನು ಉಲ್ಲೇಖಿಸಿ ಸತ್ಯಂದ್ರ ಬಂಗೇರ ರವರು ನಮೂನೇ 7 ನ್ನು ಟ್ರಿಬೂನಲ್ ಗೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಸಲ್ಲಿಸುವಾಗ ವಾದಿ ಮತ್ತು ಒಂದನೇ ಪ್ರತಿವಾದಿ ಅಪ್ರಾಪ್ತರು ಎಂಬ ವಿಚಾರವನ್ನು ಸಹಃ ಉಲ್ಲೇಖ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಭೂ ನ್ಯಾಯ ಮಂಡಳಿ, ಬೆಳ್ತಂಗಡಿ ರವರು ಸತ್ಯಂದ್ರ ಬಂಗೇರ

ರವರಿಗೆ ಕುಟುಂಬದ ಪರವಾಗಿ ಆಸ್ತಿಯನ್ನು ಮಂಜೂರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5. ದಿನಾಂಕಃ 04.07.1994 ರಂದು ಸತ್ಯೇಂದ್ರ ಬಂಗೇರ ಹಾಗೂ ಅವರ ಸಹೋದರ ಸಹೋದರಿಯವರ ನಡುವೆ ವಿಭಾಗವಾಗಿದ್ದು, ಸದರಿ ವಿಭಾಗದಲ್ಲಿಯೂ ದಾವಾ ಆಸ್ತಿಯನ್ನು ವಾದಿ, ಒಂದನೇ ಪ್ರತಿವಾದಿ ಹಾಗೂ ಸತ್ಯೇಂದ್ರ ಬಂಗೇರ ರವರ ಹೆಂಡತಿಯ ಪರವಾಗಿ ಸತ್ಯೇಂದ್ರ ಬಂಗೇರ ರವರ ಪಾಲಿಗೆ ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 20.10.2005 ರಂದು ಸತ್ಯೇಂದ್ರ ಬಂಗೇರ ರವರಿಗೆ ಒಂದನೇ ಪ್ರತಿವಾದಿಯ ಪರವಾಗಿ ವ್ಯವಸ್ಥಾ ಪತ್ರ ಮಾಡಲು ಸಂಪೂರ್ಣ ಅಧಿಕಾರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ವ್ಯವಸ್ಥಾ ಪತ್ರದ ಆಧಾರದ ಮೇಲೆ ಒಂದನೇ ಪ್ರತಿವಾದಿಯವರು ಎರಡನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಹಕ್ಕು ಹೊಂದಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಎರಡನೇ ಪ್ರತಿವಾದಿಯವರು ಮೂರನೇ ಮತ್ತು ಇತರೆ ಪ್ರತಿವಾದಿಗಳಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಯಾವುದೇ ಹಕ್ಕು ಹೊಂದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

6. ದಾವಾ ಆಸ್ತಿಯನ್ನು ಖರೀದಿಸಿದ ನಂತರ ಪಹಣಿ ಪತ್ರಿಕೆಗಳನ್ನು ನನ್ನ ಹೆಸರಿಗೆ ಬದಲಾಯಿಸಿಕೊಳ್ಳುವಾಗ ವಾದಿಯವರಿಗೆ ಯಾವುದೇ ನೋಟಿಸು ನೀಡಿರುವುದಿಲ್ಲ. ದಾವಾ ಆಸ್ತಿಗಳನ್ನು ನಾನು ಮೂರನೇ ಪ್ರತಿವಾದಿಯಿಂದ ಖರೀದಿಸುವಾಗ ವಾದಿಯಿಂದ ಅನುಮತಿ ಪಡೆದಿರುವುದಿಲ್ಲ. ಆ ಕಾರಣದಿಂದ ಮೂರನೇ ಪ್ರತಿವಾದಿಯವರು ನನಗೆ ಮಾಡಿ ಕೊಟ್ಟ ಕ್ರಯ ಪತ್ರ ವಾದಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿಸಿದ ಆಸ್ತಿಯಲ್ಲಿ ವಾದಿಗೂ ಸಹಃ ಮೂರನೇ ಒಂದು ಅಂಶ ಹಕ್ಕು ಇತ್ತು ಎಂದರೆ ಸರಿ. ಸದರಿ ವಿಚಾರವನ್ನು ತಿಳಿದಿದ್ದರೂ ಸಹಃ ಮೂರನೇ ಪ್ರತಿವಾದಿಯಿಂದ ದಾವಾ ಆಸ್ತಿಯನ್ನು ಖರೀದಿಸಿದ್ದೇನೆ ಎಂದರೆ ಸರಿ. ನಾನು ಹಾಗೂ ಮೂರನೇ ಪ್ರತಿವಾದಿ ಮತ್ತು ಎರಡನೇ ಪ್ರತಿವಾದಿ ಸೇರಿ ವಾದಿಗೆ ಮೋಸ ಮಾಡಲು ಕ್ರಯ ಸಾಧನ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ಒಬ್ಬ ನ್ಯಾಯಬದ್ಧವಾದ ಖರೀದಿದಾರ (Bonafied purchaser) ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ. ಇದೆ.

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ